ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ., ನ್ಯಾಯಾಲಯ, ಹುಬ್ಬಳ್ಳಿ

## ಸಿ.ಸಿ.ನಂ.11393/2025

| | | |
|---|---|---|
| ಪಿರ್ಯಾದಿ | : | ಶ್ರೀ ಚಿದಂಬರ ಸೌಹಾರ್ದ ಪತ್ತಿನ ಸಹಕಾರಿ ನಿಯಮಿತ, ಹುಬ್ಬಳ್ಳಿ. |

ವಿರುದ್ಧ

| | | |
|---|---|---|
| ಆರೋಪಿ | : | ಸಾಯಿನಾಥ ಅಶೋಕ ಜಾಧವ, ಹುಬ್ಬಳ್ಳಿ. |

ಆ ಪಾ ದ ನೆ

ಆರೋಪಿಯಾದ ನೀವು ಪಿರ್ಯಾದುದಾರರ ಸೌಹಾರ್ದ ಪತ್ತಿನ ಸಹಕಾರಿ ನಿಯಮಿತದ ಸದಸ್ಯರಿದ್ದು ರೂ.1,00,000/- ಗಳ ಸಾಲವನ್ನು ಪಡೆದಿದ್ದು ಮತ್ತು ಸದರಿ ಸಾಲದ ಮೊತ್ತವನ್ನು ಮರುಪಾವತಿಸಿರುವುದಿಲ್ಲ. ಸದರಿ ಸಾಲವನ್ನು ಮರುಪಾವತಿಸಲು ನೀವು ರೂ.1,64,328/- ಮೌಲ್ಯದ ಒಂದು ಚೆಕ್ ನೀಡಿದ್ದು, ಚೆಕ್ ಸಂಖ್ಯೆ: 155980 ದಿನಾಂಕ 06.06.2025 ಎಂದು ನಮೂದಿಸಿ ಕರ್ನಾಟಕ ಬ್ಯಾಂಕ್ ಲಿಮಿಟೆಡ್, ಹೊಸ ಕಾಟನ್ ಮಾರ್ಕೆಟ್, ಹುಬ್ಬಳ್ಳಿ ಶಾಖೆಯ ಚೆಕ್ಕನ್ನು ನೀಡಿದ್ದು, ಫಿರ್ಯಾದುದಾರರು ತಮ್ಮ ಬಾಬ್ತು ಬ್ಯಾಂಕ್ ಆದ ಟಿ.ಜೆ.ಎಸ್.ಬಿ ಸಹಕಾರಿ ಬ್ಯಾಂಕ್ ಲಿಮಿಟೆಡ್, ಟ್ರಾಫಿಕ್ ಐಲ್ಯಾಂಡ್, ಹುಬ್ಬಳ್ಳಿ ಶಾಖೆಗೆ ನಗದೀಕರಿಸಲು ಹಾಜರುಪಡಿಸಿದಾಗ “Refer to Drawer” ಎಂಬ ಷರಾದೊಂದಿಗೆ ದಿನಾಂಕ 10.06.2025 ರಂದು ಚೆಕ್ಕು ಅಮಾನ್ಯಗೊಂಡಿದ್ದು, ಆ ಬಗ್ಗೆ ಪಿರ್ಯಾದಿ ತಮ್ಮ ವಕೀಲರ ಮುಖಾಂತರ ನಿಮಗೆ ದಿನಾಂಕ 23.06.2025 ರಂದು ಕಾನೂನುಬದ್ಧ ತಿಳುವಳಿಕೆ ಪತ್ರವನ್ನು ನೊಂದಾಯಿತ ಅಂಚೆ ಮೂಲಕ ಕಳುಹಿಸಿದ್ದು, ನೀವು ಹಣವನ್ನು ಮರುಪಾವತಿ ಮಾಡಿರುವುದಿಲ್ಲ ಮತ್ತು ಪಿರ್ಯಾದಿಗೆ ಮೋಸ ಮತ್ತು ನಷ್ಟ ಮಾಡುವ ಉದ್ದೇಶದಿಂದ ವರ್ಗಾವಣೆ ಲಿಖಿತಗಳ ಅಧಿನಿಯಮ ಕಲಂ 138 ರಡಿಯಲ್ಲಿ ದಂಡನೀಯವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಎಸಗಿರುತ್ತೀರಿ.

ಪ್ರಶ್ನೆ:1 ಈಗ ಓದಿ ಹೇಳಿದ ಆಪಾದನೆ ನಿಮಗೆ ತಿಳಿಯಿತೆ**?**

ಉತ್ತರ:

ಪ್ರಶ್ನೆ:2 ಮೇಲ್ಕಂಡ ಆಪಾದನೆಯನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆ ಆಗಬೇಕೆ**?**

ಉತ್ತರ:

(ದಿನಾಂಕ **02.03.2026** ರಂದು ತೆರೆದ ನ್ಯಾಯಾಲಯದಲ್ಲಿ ಆರೋಪಿಗೆ ತಿಳಿಯುವ ಭಾಷೆಯಲ್ಲಿ ಆಪಾದನೆಯನ್ನು ಓದಿ ಹೇಳಿ, ತಿಳಿಸಿ, ಸರಿ ಇದೆ ಎಂದು ಉತ್ತರವನ್ನು ನೀಡಿರುತ್ತಾರೆ)

ಸ್ಥಳ: ಹುಬ್ಬಳ್ಳಿ
ದಿನಾಂಕ: **02.03.2026**

ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ, ಹುಬ್ಬಳ್ಳಿ.